# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ಎಸ್.ಸಿ. ಸಂಖ್ಯೆಃ 173/2019

ಅ.ಸಾ. 02

ದೊ.ಸಾ. 05

| | | |
|---|---|---|
| ಸಾಕ್ಷಿಯ ಹೆಸರು | ಃ | ಮಂಜುನಾಥ ಸುರಪುರ |
| ತಂದೆ ಹೆಸರು | ಃ | ರಾಮಪ್ಪ |
| ವಯಸ್ಸು | ಃ | 27 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ಕೆಲಗೇರಿ, ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ | 10/03/2022 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಮೃತ ನಾಗರಾಜ ಹರಪನಹಳ್ಳಿ ಈತನ ಪರಿಚಯವಿತ್ತು. ಆತನ ತಮ್ಮ ಚಾಸಾ.1 ರಾಕೇಶ ಈತನ ಪರಿಚಯ ಇದೆ. ನನಗೆ ಚಾಸಾ.4 ಮಂಜುನಾಥ ಮುಗದ ಈತನ ಪರಿಚಯವಿದೆ.

2. ಸುಮಾರು 3 ವರ್ಷಗಳ ಹಿಂದೆ ಕರ್ನಾಟಕ ಯುನಿವರ್ಸಿಟಿ ಧಾರವಾಡದ ಲೇಡಿಜ್ ಹಾಸ್ಟೇಲ್ ಎದುರಿಗೆ ಇರುವ ನೀಲಗಿರಿ ತೋಪಿಗೆ ನನ್ನ ಕರೆದುಕೊಂಡು ಹೋಗಿದ್ದರು. ಆ ಸ್ಥಳದಲ್ಲಿ ನಾಗರಾಜನ ಕೊಲೆಯಾಗಿತ್ತು. ಪೊಲೀಸರು ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಸದರಿ ಜಾಗವನ್ನು ಚಾಸಾ.1 ಮತ್ತು ಪೊಲೀಸರು ನನಗೆ ತೋರಿಸಿದ್ದಾರೆ. ಆ ಜಾಗದಲ್ಲಿ ಒಂದು ಬಡಿಗೆ ಇದ್ದು, ಆ ಸ್ಥಳದಲ್ಲಿ ಒಂದು ಪೋಟೋ ತೆಗೆದುಕೊಂಡರು. ಆ ಸ್ಥಳದಲ್ಲಿ ಪಂಚನಾಮೆಯನ್ನು ಬರೆದರು. ಆ ಜಾಗದಲ್ಲಿ ಖಾರದಪುಡಿಯನ್ನು ತೋರಿಸಿದರು. ಪಂಚನಾಮೆಯನ್ನು ಬೆಳಿಗ್ಗೆ 7.30 ರಿಂದ 10.30 ಗಂಟೆಯವರೆಗೆ ಬರೆಯಲಾಯಿತು. ಪಂಚನಾಮೆಗೆ ನನ್ನ ಮತ್ತು ಮಂಜುನಾಥ ಮುಗದ ಇವರ ಸಹಿಗಳನ್ನು ಪಡೆದಿದ್ದಾರೆ. ನಾನು ಸಹಿ ಮಾಡಿದ ಪಂಚನಾಮೆಯನ್ನು ತೋರಿಸಿದಲ್ಲಿ ಗುರ್ತಿಸುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದಕ್ಕೆ ನಿಪಿ.8 ಎಂದು ಗುರ್ತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ.8(ಎ) ಎಂದು ಗುರ್ತಿಸಲಾಯಿತು. ಚಾಸಾ.4 ನಿಪಿ.8 ಕ್ಕೆ ಸಹಿ ಮಾಡಿದ್ದು, ಸಾಕ್ಷಿ

ಗುರ್ತಿಸಿದ ಸಹಿಗೆ ನಿಪಿ.8(ಬಿ) ಎಂದು ಗುರ್ತಿಸಲಾಯಿತು. ಜಾಗದಲ್ಲಿ ತೆಗೆದ ಪೋಟೋವನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಸದರಿ ಪೋಟೋವನ್ನು ನೋಡುತ್ತಿದ್ದು, ಅದಕ್ಕೆ ನಿಪಿ.9 ಎಂದು ಗುರ್ತಿಸಲಾಯಿತು. ಅದರಲ್ಲಿಯ ಸಾಕ್ಷಿಯ ಪೋಟೋಗೆ ನಿಪಿ.9(ಎ) ಎಂದು ಗುರ್ತಿಸಲಾಯಿತು. ಚಾಸಾ.1 ಜಾಗವನ್ನು ತೋರಿಸಿದ್ದು, ಆತನ ಪೋಟೋಗೆನಿಪಿ.9(ಬಿ) ಎಂದು, ಇನ್ನೊರ್ವ ಪಂಚನಾದ ಮಂಜುನಾಥನ ಪೋಟೋಗೆ ನಿಪಿ.9(ಸಿ) ಎಂದು ಗುರ್ತಿಸಲಾಯಿತು. ಉಳಿದ ಇಬ್ಬರು ಪೊಲೀಸ್ ಇಲಾಖೆಯ ಅಧಿಕಾರಿಗಳಾಗಿದ್ದಾರೆ. ಜಾಗದಲ್ಲಿ ಪಂಚನಾಮೆ ಹೊರತಾಗಿ ಬೇರೆ ದಾಖಲೆಗೆ ನನ್ನ ಸಹಿ ಪಡೆದಿಲ್ಲ.

3. ಗುನ್ನಾ ಜಾಗದ ಹತ್ತಿರ ಮೋಟಾರ್ ಸೈಕಲ್ ಇತ್ತು. ಪೊಲೀಸರು ಅದರ ಪೋಟೋ ತೆಗೆದುಕೊಂಡು ತಮ್ಮ ತಾಬಾಕ್ಕೆ ತೆಗೆದುಕೊಂಡಿದ್ದಾರೆ. ಟಿವಿಎಸ್ ಎಂಟಾರ್ಕ ಎನ್ನುವ ಮೋಟಾರ್ ಸೈಕಲ್ ಇತ್ತು. ಸದರಿ ಮೋಟಾರ್ ಸೈಕಲ್‌ಗೆ ನಂಬರ್ ಪ್ಲೇಟ್ ಇರಲಿಲ್ಲ. ಆ ದಿನ ಅಮಾನತ್ತುಪಡಿಸಿದ ಬಡಿಗೆಯನ್ನು ನೋಡಿದಲ್ಲಿ ಗುರ್ತಿಸುತ್ತೇನೆ. (ಮರದ ಕೊಲಿಗೆ ಬಟ್ಟೆಯನ್ನು ಸುತ್ತಿ ಮೊಹರು ಹಾಕಿದ್ದು, ಸಾಕ್ಷಿಯಿಂದ ಗುರ್ತಿಸಿಕೊಳ್ಳಲು ಅದನ್ನು ತೆರೆಯಲು ಸರ್ಕಾರಿ ಅಬಿಯೋಜಕರು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು. ಮೊಹರನ್ನು ತೆರೆಯಲಾಯಿತು). ಅದರಲ್ಲಿರುವ ಸುಮಾರು 3 ಅಡಿ ಉದ್ದದ ಮರದ ಬಡಿಗೆ ಇದ್ದು ಅದಕ್ಕೆ ಮುಮಾ.3 ಎಂದು ಗುರ್ತಿಸಲಾಯಿತು. ಸ್ಥಳದಿಂದ ಅಮಾನತ್ತುಪಡಿಸಿದ ದ್ವಿಚಕ್ರ ವಾಹನವನ್ನು ನೋಡಿದಲ್ಲಿ ಗುರ್ತಿಸುತ್ತೇನೆ. (ಸದರಿ ವಾಹನವನ್ನು ಅದರ ಮಾಲೀಕರ ಮಧ್ಯಂತರ ಸ್ವಾಧೀನಕ್ಕೆ ಕೊಟ್ಟಿದ್ದು, ಸಾಕ್ಷಿಗೆ ಅದರ ಪೋಟೋವನ್ನು ತೋರಿಸಿ ಗುರ್ತಿಸಿಕೊಳ್ಳಲಾಯಿತು). ಸದರಿ ಪೋಟೋಗಳನ್ನು ನೋಡುತ್ತಿದ್ದು, ಅವುಗಳಿಗೆ ನಿಪಿ.10 ರಿಂದ 13 ಎಂದು ಗುರ್ತಿಸಲಾಯಿತು.

4. ಪಂಚನಾಮೆ ಬರೆದ ಹಿಂದಿನ ದಿನ ರಾತ್ರಿ ಸುಮಾರು 11.00 ಗಂಟೆಗೆ ಸಬ್ ಅರ್ಬನ್ ಪೋಲಿಸ್ ಠಾಣೆಗೆ ಚಾಸಾ.1 ರಾಕೇಶ ನನ್ನನ್ನು ಕರೆದುಕೊಂಡು ಹೋಗಿದ್ದ. ಚಾಸಾ.1 ಹೇಳಿದಂತೆ ನಾನು ದೂರನ್ನು ಬರೆದು ಆತನಿಗೆ ಕೊಟ್ಟೆ. ದೂರನ್ನು ಬರೆದ ಬಗ್ಗೆ ನಾನು ದಸ್ತೂರ ಎಂದು ಸಹಿ ಹಾಕಿದ್ದೇನೆ. ಸದರಿ ದೂರನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ನಿಪಿ.14 ಎಂದು ಗುರ್ತಿಸಲಾಯಿತು. ಅದರಲ್ಲಿಯ ಸಾಕ್ಷಿಯ ಸಹಿಗೆ ನಿಪಿ.14(ಎ) ಎಂದು ಗುರ್ತಿಸಲಾಯಿತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿ, ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

5. ನನ್ನ ಸಹಿ ಇರುವ ದಾಖಲೆಯನ್ನು ತೋರಿಸಿದಲ್ಲಿ ಗುರ್ತಿಸುತ್ತೇನೆ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ನಕಾಶೆಯಾಗಿದ್ದು, ಅದಕ್ಕೆ ನಿಪಿ.15 ಎಂದು ಗುರ್ತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ.15(ಎ) ಎಂದು ಗುರ್ತಿಸಲಾಯಿತು. ನಿಪಿ.15 ಕ್ಕೆ ಮಂಜುನಾಥ ಮುಗದ ಸಹಿ ಮಾಡಿದ್ದು, ಅದನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಸಾಕ್ಷಿ ಗುರ್ತಿಸಿದ ಸಹಿಗೆ ನಿಪಿ.15(ಬಿ) ಎಂದು ಗುರ್ತಿಸಲಾಯಿತು. ನಾಗರಾಜನ ಕೊಲೆಯನ್ನು, ನಾಗರಾಜನನ ಸ್ನೇಹಿತನಾದ ಮಲ್ಲಿಕಾರ್ಜುನ ಮತ್ತು ಮಲ್ಲಿಕಾರ್ಜುನನ ಸ್ನೇಹಿತರು ಸೇರಿ ಕೊಲೆ ಮಡಿದ್ದಾರೆ ಎಂದು ಗೊತ್ತಾಯಿತು. ದುಡ್ಡಿನ ಸಲುವಾಗಿ ಅವರು ಕೊಲೆ ಮಾಡಿದ್ದಾರೆ ಎಂದು ಕೇಳಿ ಗೊತ್ತಾಯಿತು.

**<u>ಪಾಟೀಸವಾಲು 2 ನೇ ಆರೋಪಿ ಪರವಾಗಿ ಶ್ರೀ.ಎ ಎಸ್ ಎಸ್ ವಕೀಲರಿಂದಃ</u>**

6. ಚಾಸಾ.1 ನಮ್ಮ ಮನೆಯ ಹತ್ತಿರದಲ್ಲಿ ವಾಸವಾಗಿದ್ದು ಮತ್ತು ನನ್ನ ಸ್ನೇಹಿತನಾಗಿದ್ದಾನೆ. ಪೊಲೀಸರು ಸುಮಾರು 3 ವರ್ಷಗಳ ಹಿಂದೆ ಜುಲೈ ತಿಂಗಳಿನಲ್ಲಿ ಒಂದು ದಿನ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಪಂಚನಾಮೆಯನ್ನು ಬರೆದ ದಿನಾಂಕ ನೆನಪಿಲ್ಲ. ಪಿರ್ಯಾದಿಯನ್ನು ಬರೆದ ದಿನಾಂಕ ನೆನಪಿಲ್ಲ. ಆದರೆ ಪಂಚನಾಮೆಯ ಹಿಂದಿನ ರಾತ್ರಿ ಬರೆದಿದ್ದೇನೆ. ದೂರನ್ನು ಬರೆಯುವ ಮೊದಲು ನಾನು ಗುನ್ನಾ ಜಾಗಕ್ಕೆ ಹೋಗಿರಲಿಲ್ಲ. ಆದರೆ ರಾಕೇಶ ಹೋಗಿದ್ದ. ರಾಕೇಶನಿಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ರಾತ್ರಿ 11.00 ಗಂಟೆ ಸಮಯಕ್ಕೆ ದೂರು ಬರೆದುಕೊಡಲು ಹೋಗಿದ್ದೆ. ದೂರು ಬರೆದುಕೊಡಲು ಹೋದಾಗ ಹೆಣ ಎಲ್ಲಿ ಇತ್ತು ಎಂದು ಪೊಲೀಸರು ವಿಚಾರಣೆ ಮಾಡಿದ್ದಾರೆ. ರಾತ್ರಿ 11.00 ಗಂಟೆಗೆ ಪೊಲೀಸರು ನಮ್ಮನ್ನು ಗುನ್ನಾ ಜಾಗಕ್ಕೆ ಕರೆದುಕೊಂಡು ಹೋಗಿರಲಿಲ್ಲ.

7. ದೂರಿನಲ್ಲಿ ಮೋಟಾರ್ ಸೈಕಲ್ ಬಗ್ಗೆ ಬರೆದಿರುವುದಿಲ್ಲ. ಪಿರ್ಯಾದಿ ಬರೆಸುವಾಗ ಹೆಣದ ಹತ್ತಿರ ಬಡಿಗೆ ಇತ್ತು ಎಂದು ನನಗೆ ಹೇಳಿ ಬರೆಸಿದ್ದಾನೆ. ಬೇರೆ ಯಾವುದೇ ವಸ್ತುಗಳು ಇದೆ ಎಂದು ಬರೆಸಿಲ್ಲ. ಬಡಿಗೆ ಬಿದ್ದ ಜಾಗದಿಂದ ಕಂಪೌಂಡ್ ಗೋಡೆಯ ಹತ್ತಿರ ಮೋಟಾರ್ ಸೈಕಲ್ ಇತ್ತು. ಬಡಿಗೆ ಬಿದ್ದ ಜಾಗದಿಂದ ಮೋಟಾರ್ ಸೈಕಲ್‌ನಿಂತ ಜಾಗ ಸುಮಾರು 300 ಅಡಿ ದೂರದಲ್ಲಿ ಇರಬಹುದು. ಮೋಟಾರ್ ಸೈಕಲ್‌ನ ಪೋಟೋವನ್ನು ತೆಗೆದಿದ್ದಾರೆ. ಸದರಿ ಮೋಟಾರ್ ಸೈಕಲ್ ನಿಂತ ಜಾಗದ ಚಕಬಂದಿಯನ್ನು ಹೇಳಲು ಆಗುವುದಿಲ್ಲ. ಚಕಬಂದಿಯನ್ನು ನನಗೆ ದಿಕ್ಕಿನಿಂದ ಹೇಳಲು ಆಗುವುದಿಲ್ಲ. ಬಡಿಗೆಯನ್ನು ಪೊಲೀಸರು ತೋರಿಸಿದ್ದರು. ಬಡಿಗೆಯ ಮೇಲೆ ಮಣ್ಣಿನ

ಕಲೆ ಇತ್ತು. ನಾವು ಜಾಗಕ್ಕೆ ಹೋದ ಹಿಂದಿನ ದಿನ ಆ ಸ್ಥಳದಲ್ಲಿ ಮಳೆಯಾಗಿತ್ತು. ಪಂಚನಾಮೆಗೆ ಮಾಹಿತಿ ಕೊಟ್ಟು ನಾನು ಬರೆಸಿರುವುದಿಲ್ಲ. ಸ್ಥಳದಲ್ಲಿ ಬರೆದ ಮಹಜರಿನಲ್ಲಿ ಏನು ಬರೆದಿದ್ದಾರೆ ಎಂದು ಪೊಲೀಸರು ನನಗೆ ಓದಿ ಹೇಳಿದ್ದಾರೆ. ಪಂಚನಾಮೆಯನ್ನು ಪೊಲೀಸ್ ಅಧಿಕಾರಿ ಬರೆದಿದ್ದಾರೆ. ಪೊಲೀಸರು ಪಂಚನಾಮೆ ಹೊರತುಪಡಿಸಿ ಬೇರೆ ಯಾವುದೇ ಚೀಟಿಯ ಮೇಲೆ ನನ್ನ ಸಹಿ ಪಡೆದಿಲ್ಲ. ಪಂಚನಾಮೆಯಲ್ಲಿ ಬಡಿಗೆ ಮೂರು ಫೂಟ್ ಉದ್ದ ಇದೆ ಎಂದು ಬರೆದಿದ್ದಾರೆ. ಬಡಿಗೆಯ ಸುತ್ತಳತೆಯ ಬಗ್ಗೆಯೂ ಮಹಜರಿನಲ್ಲಿ ಬರೆದಿದ್ದಾರೆ.

8. ಪೊಲೀಸರು ಜಾಗದಿಂದ ಖಾರದ ಪುಡಿಯನ್ನು ತೆಗೆದುಕೊಂಡಿದ್ದಾರೆ. ಜಾಗದಲ್ಲಿ ಖಾರದ ಪುಡಿ ತೆಗೆದುಕೊಂಡ ಬಗ್ಗೆ ಪಂಚನಾಮೆಯಲ್ಲಿ ಬರೆದಿದೆ ಎಂದು ನನಗೆ ಓದಿ ಹೇಳಿಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಗುನ್ಹಾ ಜಾಗಕ್ಕೆ ಹೋಗಲೂ ಇಲ್ಲ ಹಾಗೂ ಅಲ್ಲಿ ಮಹಜರನ್ನು ಬರೆಯಲೂ ಇಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಡಿಸಿಲ್ಲ ಅನ್ನುವುದು ಸರಿಯಲ್ಲ. ರಾಕೇಶ ನನ್ನ ಸ್ನೇಹಿತನಾದ ಕಾರಣ ಆತ ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟೀಸವಾಲು 1 ಮತ್ತು 3 ನೇ ಆರೋಪಿಗಳ ಪರವಾಗಿ ಶ್ರೀ ಎ ವಿ ಏಣಗಿ ಮತ್ತು ಶ್ರೀ.ಪಿ ಹೆಚ್ ಹೆಚ್ ವಕೀಲರಿಂದಃ**

9. 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟಿಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

10/03/2022

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.